# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು – 570 006

ಪ್ರವೇಶಾತಿ ವಿಭಾಗ

ಸಂಖ್ಯೆ: ಕರಾಮುವಿ/ಪ್ರವಿ/ಎಡಿಎಂ-1/ 143 /2025-26 ದಿನಾಂಕ: 12.09.2025

**ಸುತ್ತೋಲೆ:**

**ವಿಷಯ : 2025-26ರ ಜುಲೈ ಆವೃತ್ತಿಯಲ್ಲಿನ ಬಿ.ಇಡಿ ಶಿಕ್ಷಣಕ್ರಮದ ಪ್ರವೇಶಾತಿ ಕುರಿತಂತೆ;**

**ಉಲ್ಲೇಖ:**1.ಯುಜಿಸಿ ಡೆಬ್ ಇ-ಮೇಲ್ ಸಂದೇಶ ದಿನಾಂಕ:27.08.2025

2.ವಿವಿ ಪ್ರವೇಶಾತಿ ಪರಿಷ್ಕೃತ ಅಧಿಸೂಚನೆ ಸಂಖ್ಯೆ:ಕರಾಮುವಿ/ಪ್ರವಿ/ಎಡಿಎಂ-1/ 143 / 2025-26, ದಿನಾಂಕ: 01.09.2025

3.ಸರ್ಕಾರದ ಆದೇಶ ಸಂಖ್ಯೆ: ಸಕಇ 8 ಎಸ್‌ಎಲ್‌ಪಿ 2024, ದಿನಾಂಕ: 25.08.2025

4.ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೆಹಿಮ 2025, ದಿನಾಂಕ: 03.09.2025

5.ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 12.09.2025

******

ಯುಜಿಸಿ-ಡೆಬ್‌ನ ಉಲ್ಲೇಖ(1)ರ ಸಂದೇಶದ ಮೇರೆಗೆ 2025-26ರ ಜುಲೈ ಆವೃತ್ತಿಯಲ್ಲಿ ಬಿ.ಇಡಿ ಶೈಕ್ಷಣಿಕ ಕಾರ್ಯಕ್ರಮದ ಪ್ರವೇಶಾತಿಗೆ ಉಲ್ಲೇಖ(2)ರಂತೆ ಪರಿಷ್ಕೃತ ಪ್ರವೇಶಾತಿ ಅಧಿಸೂಚನೆ ಹೊರಡಿಸುವ ಮೂಲಕ ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಬಿ.ಇಡಿ ಶೈಕ್ಷಣಿಕ ಕಾರ್ಯಕ್ರಮಕ್ಕೆ ಸಿ.ಇ.ಟಿಯ ಮೂಲಕ ಮೆರಿಟ್ ಆಧಾರದ ಮೇಲೆ ಸೀಟ್ ಮ್ಯಾಟ್ರಿಕ್ಸ್‌ಅನ್ವಯ ಸರ್ಕಾರದ ಮೀಸಲಾತಿ ನಿಯಮಗಳನ್ನು ಅನುಸರಿಸಿ ಅರ್ಹ ಅಭ್ಯರ್ಥಿಗಳನ್ನು ಕೌನ್ಸಲಿಂಗ್ ನಡೆಸುವ ಮೂಲಕ ಆಯ್ಕೆ ಮಾಡಲಾಗುವುದು.

ಸರ್ಕಾರದ ಉಲ್ಲೇಖ(3)ರ ಆದೇಶದಲ್ಲಿ ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿಗಳಿಗೆ ಶಿಕ್ಷಣ ಕಲ್ಪಿಸುವ ಶಿಕ್ಷಣ ಮತ್ತು ಉದ್ಯೋಗದಲ್ಲಿ ಒಳಮೀಸಲಾತಿ (ವರ್ಗೀಕರಣ) ಕಲ್ಪಿಸುವ ಬಗ್ಗೆ ಜಾತಿಗಳನ್ನು ಮೂರು ಪ್ರವರ್ಗಗಳಲ್ಲಿ ವಿಂಗಡಿಸಿ ಎ, ಬಿ. ಮತ್ತು ಸಿ ಎಂದು ವರ್ಗೀಕರಿಸಿ ಪರಿಶಿಷ್ಟ ಜಾತಿಗೆ ಮೀಸಲಿರುವ ಶೇಕಡ 17%ರ ಮೀಸಲಾತಿಯನ್ನು ಕ್ರಮವಾಗಿ ಶೇಕಡ 6%, 6% ಮತ್ತು 5% ಎಂದು ವರ್ಗೀಕರಿಸಿ ಆದೇಶ ಹೊರಡಿಸಲಾಗಿರುತ್ತದೆ.

ಉಲ್ಲೇಖ(4)ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿಗಳಿಗೆ ಒಳ ಮೀಸಲಾತಿಯನ್ನು ಕಲ್ಪಿಸಿರುವ ಪರಿಣಾಮವಾಗಿ ಪರಿಷ್ಕೃತ ಮೀಸಲಾತಿ ರೋಸ್ಟರ್‌ಅನ್ನು ನಿಗದಿಪಡಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ 2025ರ ಬಿ.ಇಡಿ ಶಿಕ್ಷಣಕ್ರಮದ ವಿವರಣಾ ಪುಸ್ತಕದಲ್ಲಿ ತೋರಿಸಿರುವ ಸೀಟ್ ಮ್ಯಾಟ್ರಿಕ್ಸ್ ನಲ್ಲಿರುವಂತೆ ಪರಿಶಿಷ್ಟ ಜಾತಿಗೆ ಮೀಸಲಿರುವ ಸೀಟುಗಳನ್ನು ನಿಯಮಾನುಸಾರ ಕ್ಲೇಮು ಮಾಡುವ ಅಭ್ಯರ್ಥಿಗಳು ಉಲ್ಲೇಖ(3)ರ ಸರ್ಕಾರಿ ಆದೇಶದಂತೆ ಪರಿಶಿಷ್ಟ ಜಾತಿಯಲ್ಲಿ ಯಾವ ಪ್ರವರ್ಗಕ್ಕೆ

ಸೇರಿದವರಾಗಿರುತ್ತಾರೆಂಬುದಕ್ಕೆ ಸಕ್ಷಮ ಪ್ರಾಧಿಕಾರದಿಂದ ಜಾತಿ ದೃಢೀಕರಣ ಪತ್ರ (certificate)ವನ್ನು ಪಡೆದು ಕೊಂಡು ಸೀಟುಗಳ ಆಯ್ಕೆ ಸಂಬಂಧದಲ್ಲಿ ಅಕ್ಟೋಬರ್ ಮೊದಲನೇ ವಾರದಲ್ಲಿ ನಡೆಯುವ ಕೌನ್ಸಲಿಂಗ್ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.

ಆದೇಶದ ಮೇರೆಗೆ

ಕುಲಸಚಿವ

ಗೆ:

2025ರ ಜುಲೈ ಆವೃತ್ತಿಯಲ್ಲಿನ ಬಿ.ಇಡಿ ಶಿಕ್ಷಣಕ್ರಮಕ್ಕೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ಗಮನಕ್ಕೆ – ವಿವಿಯ ಅಂತರ್ಜಾಲದಲ್ಲಿ ಪ್ರಕಟಿಸುವ ಮೂಲಕ;

ಪ್ರತಿ:

1. ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು.
2. ಡೀನ್(ಅಧ್ಯಯನ ಕೇಂದ್ರ), ಕರಾಮುವಿ, ಮೈಸೂರು.
3. ವಿಶೇಷಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯ, ಕರಾಮುವಿ, ಮೈಸೂರು.
4. ನಿರ್ದೇಶಕರು, ಪ್ರವೇಶಾತಿ ವಿಭಾಗ, ಕರಾಮುವಿ, ಮೈಸೂರು.
5. ಮುಖ್ಯಸ್ಥರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ, ಮೈಸೂರು.
6. ಮೇಲ್ವಿಚಾರಕರು, ವಿವಿ ಅಂತರ್ಜಾಲ ನಿರ್ವಹಣೆ, ಕರಾಮುವಿ, ಮೈಸೂರು – ಈ ಸುತ್ತೋಲೆಯನ್ನು ಬಿ.ಇಡಿ ಶಿಕ್ಷಣಕ್ರಮಕ್ಕೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಹಾಗೂ ಸಾರ್ವಜನಿಕರ ಮಾಹಿತಿಗಾಗಿ ವಿವಿಯ ಅಂತರ್ಜಾಲದಲ್ಲಿ ಪ್ರಕಟಿಸಲು ತಿಳಿಸಿದೆ.
7. ಬಿ.ಇಡಿ ಶಿಕ್ಷಣಕ್ರಮದ ಸೀಟುಗಳ ಆಯ್ಕೆ ಸಮಿತಿಯ ಗಮನಕ್ಕೆ.
8. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
9. ಕಚೇರಿ ಪ್ರತಿ.